*ರಚನೆಯನ್ನು ಯಾವಾಗ ಮಾಡಲಾಗುವುದು?*

ಶ್ರೀ ರಾಜಾ ಅಮರೇಶನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

1) ದುರಾಡಳಿತ, ದುರ್ನಡತೆ ಹಾಗೂ ಅವ್ಯವಹಾರಗಳ ಕಾರಣಗಳಿಂದ ಆಡಳಿತ ಮಂಡಳಿಯನ್ನು ಧಾರ್ಮಿಕ ದತ್ತಿ ಆಯುಕ್ತರು ಅಮಾನತ್ತುಗೊಳಿಸಿದ್ದಾರೆ.

2)ಈ ಪ್ರಕರಣ ಅಪೀಲು ಪಿಟಿಷನ್ ಸಂಖ್ಯೆ :124:91ಕರ್ನಾಟಕ ನ್ಯಾಯಾಧೀಕರಣದ ಮುಂದೆ ತೀರ್ಮಾನಕ್ಕೆ ಬಾಕಿ ಇದೆ. ತೀರ್ಮಾನ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

**1990-91ನೇ ಸಾಲಿನಲ್ಲಿ ಅರಣ್ಯದಿಂದ ಬಂದ ಆದಾಯ**

3639 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯ ಸರ್ಕಾರಕ್ಕೆ 90-91ನೇ ವರ್ಷದಲ್ಲಿ "ಅರಣ್ಯ ಬಾಬ್ತು" ನಿಂದ ಬರಬೇಕಾದ ವಾರ್ಷಿಕ ಆದಾಯವೆಷ್ಟು?*

*ಆ) ಈ ಬಾಬ್ತಿನಿಂದ ವರ್ಷಾಂತ್ಯದಲ್ಲಿ ಬಂದ ಹಣದ ಮೊತ್ತವೆಷ್ಟು?*

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಸರ್ಕಾರದ ಪರಿಷ್ಕೃತ ಅಂದಾಜಿನ ಪ್ರಕಾರ 90-91ನೇ ವರ್ಷದಲ್ಲಿ "ಅರಣ್ಯ ಬಾಬ್ತು" ನಿಂದ ಬರಬೇಕಾದ ಆದಾಯ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1) | "0406 - ಅರಣ್ಯ ಮತ್ತು ವನ್ಯ ಜೀವನ" | ರೂ.5049-00 (ಲಕ್ಷಗಳಲ್ಲಿ) |
| 2) | "0045 -115-01 - ಅರಣ್ಯಾಭಿವೃದ್ಧಿ ತೆರಿಗೆ" | ರೂ.500-00 (ಲಕ್ಷಗಳಲ್ಲಿ) |
| 3) | "0853 - 2 - ಅರಣ್ಯಗಳಲ್ಲಿರುವ ಗಣಿ ಮತ್ತು ಖನಿಜಗಳಿಂದ" | ರೂ.51-00 (ಲಕ್ಷಗಳಲ್ಲಿ) |
| | ಒಟ್ಟು ಬರಬೇಕಾದ ಆದಾಯ : | ರೂ.5600-00 (ಲಕ್ಷಗಳು) |

ಆ) ಮೇಲ್ಕಂಡ ವಾರ್ಷಿಕ ನಿಗಧಿಯ ಅರಣ್ಯ ಬಾಬ್ತುಗಳಿಂದ 1990-91ನೇ ವರ್ಷದಲ್ಲಿ ಬಂದ ಆದಾಯ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1) | "0406 - ಅರಣ್ಯ ಮತ್ತು ವನ್ಯ ಜೀವನ" | ರೂ. 5449-12 (ಲಕ್ಷಗಳು) |
| 2) | "0045 - 115-01 - ಅರಣ್ಯಾಭಿವೃದ್ಧಿ ತೆರಿಗೆ" | ರೂ. 499-73 (ಲಕ್ಷಗಳು) |
| 3) | "0853 - 2 - ಅರಣ್ಯಗಳಲ್ಲಿರುವ ಗಣಿ ಮತ್ತು ಖನಿಜಗಳಿಂದ" | ರೂ. 69-25 (ಲಕ್ಷಗಳು) |
| | ವರ್ಷದಲ್ಲಿ ಬಂದ ಆದಾಯ : | ರೂ. 6068-10 (ಲಕ್ಷಗಳು) |

**ಮೂಡಿಗೆರೆ ತಾಲ್ಲೂಕಿನಲ್ಲಿರುವ ಪಶು ಸಂಗೋಪನೆ ಕೇಂದ್ರಗಳ ಸಂಖ್ಯೆ**

3622 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಮೂಡಿಗೆರೆ ತಾಲ್ಲೂಕಿನಾದ್ಯಂತ ಇರುವ ಒಟ್ಟು ಪಶುಸಂಗೋಪನಾ ಕೇಂದ್ರಗಳ ಸಂಖ್ಯೆ ಎಷ್ಟು?*

ಅ) ಈ ಕೇಂದ್ರಗಳಲಲ್ಲಾ ಪಶು ವೈದ್ಯರನ್ನು ಭರ್ತಿ ಮಾಡಲಾಗಿದೆಯೇ?

ಇ) ಈ ಕೇಂದ್ರಗಳಲ್ಲಿ ಪಶುವೈದ್ಯರನ್ನು ಭರ್ತಿ ಮಾಡಲಾಗದಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಬಸವರಾಜ ಪಾಟೀಲ್ (ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು):

ಅ) ಒಟ್ಟು 14

| | | |
|---|---|---|
| 1) ಪಶು ವೈದ್ಯ ಆಸ್ಪತ್ರೆ | - | 1 |
| 2) ಪಶು ಚಿಕಿತ್ಸಾಲಯ | - | 4 |
| 3) ಸಂಚಾರಿ ಪಶು ಚಿಕಿತ್ಸಾಲಯ | - | 1 |
| 4) ಪ್ರಾಥಮಿಕ ಪಶು ಚಿಕಿತ್ಸಾಲಯ | - | 7 |
| 5) ಕೃತಕ ಗರ್ಭಧಾರಣಾ ಕೇಂದ್ರ | - | 1 |
| **ಒಟ್ಟು** | | **: 14** |

ಆ) ಇವುಗಳಲ್ಲಿ ಪಶುವೈದ್ಯ ಆಸ್ಪತ್ರೆ ಮತ್ತು ಪಶು ಚಿಕಿತ್ಸಾಲಯಗಳಲ್ಲಿ ಮಾತ್ರ ಪಶು ವೈದ್ಯರ ಹುದ್ದೆಗಳಿದ್ದು ಅವನ್ನು ಭರ್ತಿ ಮಾಡಲಾಗಿದೆ. ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಹುದ್ದೆಯನ್ನು ಸೃಷ್ಟಿಸಬೇಕಾಗಿದೆ.

ಇ) ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಪಶು ವೈದ್ಯಾಧಿಕಾರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

**ಮುಳಬಾಗಿಲು ತಾಲ್ಲೂಕಿನಲ್ಲಿ ರಿಲೀಫ್ ಕಾಮಗಾರಿಗಳ ಪ್ರಾರಂಭ**

3526 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇತ್ತೀಚೆಗೆ ಸಕಾಲದಲ್ಲಿ ಮಳೆ ಬಾರದ ಪ್ರಯುಕ್ತ ಮೂರನೇ ಎರಡು ಭಾಗದಷ್ಟು ಜಮೀನಿನಲ್ಲಿ ಬಿತ್ತನೆಯಾಗಿಲ್ಲವೆಂದು ತಾಲ್ಲೂಕು ತಹಶೀಲ್ದಾರರವರು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕೂಲಿಗಾರರಿಗೆ ಕೆಲಸ ಒದಗಿಸಲು ರಿಲೀಫ್ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಮುಳಬಾಗಿಲು ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಂಘಗಳ ನೋಂದಾವಣಿ.**

3380 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಂಘಗಳಿಗೆ ನೋಂದಾವಣಿ ಮಾಡಿಕೊಳ್ಳಲು ಒಟ್ಟು ಬಾಕಿಯಿರುವ ಅರ್ಜಿಗಳೆಷ್ಟು? ಆ ಊರಿನ ಹೆಸರುಗಳೇನು?